ಶ್ರೀಮದಿಂಡಿಯಾ ಚಕ್ರವರ್ತಿಗಳವರ ಸಮ್ಮುಖದಿಂದ.

ಬಕಿಂಗ್ ಹ್ಯಾಂ ಅರಮನೆ.

1907ನೆ ಇಸವಿ ಆಗಸ್ಟ್ 13ನೆಯ ತಾರೀಖು.

ನಮ್ಮ ಪ್ರಿಯರಾದ ವೈಸರಾಯವರೆ,

ಕಳೆದ ಹನ್ನೊಂದು ವರ್ಷಗಳಿಂದ ಇಂಡಿಯಾ ದೇಶವನ್ನು ಅತಿ ಕ್ರೂರವಾಗಿ ಪೀಡಿಸುತ್ತ ಬಂದಿರುವ ಪ್ಲೇಗುಪದ್ರವದ ಈಚಿನ ವಿದ್ಯಮಾನವನ್ನು ತಿಳಿದು ನಾವು ವಿಶೇಷವಾಗಿ ವ್ಯಾಕುಲಪಡುತ್ತಿದ್ದೇವೆ.

ನಮ್ಮ ಇಂಡಿಯಾ ದೇಶದ ಪ್ರಜೆಗಳ ಕ್ಷೇಮಚಿಂತೆಯು ಯಾವಾಗಲೂ ನಮಗೆ ಬಹು ಘನವಾದ ವಿಷಯವಾಗಿ ಇರತಕ್ಕದ್ದಾಗಿದೆ. ಆ ದೇಶದಲ್ಲಿ ರೋಗಪೀಡಿತವಾದ ಮನೆಗಳಲ್ಲಿ ಜನರು ಬಾಯನ್ನು ಸಹ ತೆರೆಯದ್ದೆ ಬಹು ತಾಳ್ಮೆಯಿಂದ ಸಹಿಸಿಕೊಂಡಿರುವ ಸಂಕಟಗಳನ್ನು ನೆನೆದು ನಮಗೆ ಬಹಳ ವ್ಯಸನವಾಗುತ್ತದೆ.

ಈ ರೋಗದ ಕಾರಣಗಳನ್ನು ಕಂಡು ಹಿಡಿಯುವದಕ್ಕಾಗಿಯೂ ಇದರಿಂದ ಉಂಟಾಗುವ ಕೇಡುಗಳನ್ನು ಕಡಿಮೆಮಾಡುವದಕ್ಕಾಗಿಯೂ ನಿಮ್ಮ ಹಿಂದಿನ ವೈಸರಾಯಿಗಳೂ ನೀವೂ ಸಹ ಅವಿಚ್ಛಿನ್ನವಾಗಿ ಪ್ರಯತ್ನಗಳನ್ನು ಮಾಡುತ್ತ ಬಂದಿರುವ ಅಂಶವು ನಮಗೆ ಚೆನ್ನಾಗಿ ವೇದ್ಯವಾಗಿದೆ.

ಈಗ ನೀವು, ಶ್ರದ್ಧಾಳುಗಳೂ ಸಮರ್ಥರೂ ಆದ ಅಧಿಕಾರಿಗಳೊಡನೆ ಸಮಾಲೋಚನೆ ಮಾಡಿ, ಏರ್ಪಡಿಸುತ್ತಿರುವ ಹೊಸ ಏರ್ಪಾಡುಗಳು ಜಗದೀಶ್ವರನ ಕೃಪೆಯಿಂದ ಸಫಲವಾಗಲಿ ಎಂದು ನಾವು ಮನಃಪೂರ್ವಕವಾಗಿ ಹಾರೈಸಿ ಪ್ರಾರ್ಥಿಸುತ್ತೇವೆ.

ನಮ್ಮ ಮನಃಪೂರ್ವಕವಾದ ಈ ಅನುತಾಪೋಕ್ತಿಯನ್ನು ನಮ್ಮ ಇಂಡಿಯಾ ದೇಶದ ಪ್ರಜೆಗಳಿಗೆ ನೀವು ತಿಳಿಸಬೇಕೆಂಬದಾಗಿ ಕೋರುತ್ತೇವೆ.

ವೈಸರಾಯವರ ನಿವಾಸ, ಸಿಮ್ಲಾ.

1907ನೆ ಇಸವಿ ಆಗಸ್ಟ್ 16.

ಪ್ರಿಯರಾದ ಮಿ॥ ವಿಲ್ಲಿಯಂಸ್ ರವರೆ,

ಇಂಡಿಯಾದೇಶದ ಜನರು ಎದೆ ಕರಗಿಸುವಷ್ಟು ಸೈರಣೆಯಿಂದಲೂ ಧೈರ್ಯದಿಂದಲೂ ಸಹಿಸಿಕೊಂಡು ಬಂದಿರುವ ಮಹಾ ಭಯಂಕರವಾದ ಪ್ಲೇಗು ರೋಗದ ಹಾವಳಿಯನ್ನು ನೋಡಿ ನಮಗೆ ಮಹತ್ತಾದ ವ್ಯಸನವೂ ಚಿಂತೆಯೂ ಉಂಟಾಗಿವೆ. ದೇಶವನ್ನು ಈ ಘೋರವಾದ ವಿಪತ್ತಿನಿಂದ ಪಾರುಮಾಡಬೇಕೆಂದು ನಾವು ಮಾಡಿದ ಪ್ರಯತ್ನವು ವಿಶೇಷವಾಗಿ ಫಲಕಾರಿಯಾಗಲಿಲ್ಲವೆಂದು ನಮಗೆ ಬಹಳ ವಿಷಾದ ವುಂಟಾಗಿದೆ.

ನಮ್ಮ ಕಾರ್ಯಕ್ಕೆ ಅಪಾರವಾದ ಪ್ರತಿಬಂಧಕಗಳು ಇದ್ದವು. ಅವುಗಳಲ್ಲಿ ಈ ರೋಗದಿಂದ ವಿಶೇಷವಾಗಿ ಪೀಡಿಸಲ್ಪಡುವ ಜನರ ಅಸಾಮರ್ಥ್ಯವೇ ಪ್ರಾಯಶಃ ಬಹು ಪ್ರಬಲವಾದ್ದಾಗಿತ್ತು; ಎಂದರೆ, ಈ ಜನರಿಗೆ ನಾವು ಯಾವ ಆರೋಗ್ಯ ಸಂಬಂಧವಾದ ನಿಯಮಗಳನ್ನು ತಿಳಿಸಿಕೊಟ್ಟು ಆಚರಣೆಗೆ ತರಬೇಕೆಂದು ಯತ್ನಿಸಿದೆವೊ ಅವುಗಳನ್ನು ಇವರು ತಿಳಿದುಕೊಳ್ಳಲಾರದೆ ಹೋದ್ದೂ ಅಲ್ಲದೆ ಅನೇಕ ಸಂದರ್ಭಗಳಲ್ಲಿ ಅವುಗಳ ವಿಷಯದಲ್ಲಿ ತಮ್ಮ ಅನವಧಾನವನ್ನು ಕೂಡ ಕಾರ್ಯಪ್ರಯತ್ನದಿಂದ ತೋರ್ಪಡಿಸಿಕೊಂಡರು. ನಮ್ಮ ವೈದ್ಯರುಗಳೂ ಎಗ್ಸ್ಟ್ರಾ ಅಸಿಸ್ಟೆಂಟ್ಸ್ ಎಂದರೆ ಕಾರ್ಯಾಧಿಕಾರಿಗಳೂ ಮತ್ತು ಇಂಡಿಯಾ ದೇಶದ ಸಮಸ್ತ ಭಾಗಗಳಲ್ಲಿಯೂ ಇರುವ ಸರ್ಕಾರಿ ಉದ್ಯೋಗಸ್ಥರಲ್ಲಿದ್ದ ಪರೋಪಕಾರಶೀಲರೂ ಸಹ ಈ ರೋಗನಿವಾರಣ ಕಾರ್ಯದಲ್ಲಿ ತಮ್ಮ ಪರೋಪಕಾರ ಬುದ್ಧಿಯನ್ನೂ ಮಹಾ ಧೈರ್ಯದಿಂದ ವ್ಯಕ್ತಪಡಿಸಿದರು; ಇವರಲ್ಲಿ ಅನೇಕರು ಈ ಕಾರ್ಯದಲ್ಲಿ ತಮ್ಮ ಪ್ರಾಣಗಳನ್ನೇ ಬಲಿಕೊಟ್ಟುಬಿಟ್ಟರು. ಇಷ್ಟಾದರೂ ಅತ್ಯಲ್ಪವಾದ ಫಲ ಉಂಟಾಯಿತೇ ಹೊರತು ಪಟ್ಟ ದೇಹಶ್ರಮಕ್ಕೂ ಮಾಡಿದ ಧನವ್ಯಯಕ್ಕೂ ಅನುಗುಣವಾಗಿ ನಿರೀಕ್ಷಿಸಬಹುದಾದಷ್ಟು ವಿಶೇಷ ಫಲ ಉಂಟಾಗಲಿಲ್ಲ.

ಪ್ಲೇಗು ಕಮಿಷನ್ ಸಭೆಯವರು ಈ ರೋಗದ ವಿಷಯವಾಗಿ ನಡಿಸುತ್ತಿರುವ ವಿಚಾರಣೆಯಲ್ಲಿ ಈಗತಾನೆ ಪ್ರಥಮಭಾಗವು ಪೂರ್ತಿಯಾಗಿ ಕೆಲವು ಅಂಶಗಳು ನಿಷ್ಕರ್ಷಿಸಲ್ಪಟ್ಟಿವೆ. ಈ ಅಂಶಗಳು ಬಂದುವೇಳೆ ರೋಗ ಶಮನ ವಿಚಾರವನ್ನು ಮೊದಲಿಗಿಂತ ಸುಲಭಮಾಡದೆ ಹೋದರೂ ಕೊನೆಗೆ ಇಷ್ಟಾರ್ಥಸಿದ್ಧಿಯಾಗುವದೆಂದು ಸಂಪೂರ್ಣವಾದ ಭರವಸೆಯಿಂದ ನಾವು ಮುಂದೆ ಕಾರ್ಯ ಮಾಡಬೇಕಾದ ಮಾರ್ಗವನ್ನಾದರೂ ತೋರಿಸಿಕೊಡುತ್ತವೆ. ಅಲ್ಲದೆ ಹಿಂದೆ ಬಹಳ ಖರ್ಚಿಗೂ ಕೋಟಲೆಗೂ ಆಸ್ಪದವಾಗುವಂತೆ ನಡಿಸುತ್ತಿದ್ದ ಅನೇಕ ಕಾರ್ಯಗಳನ್ನು ನಿರಪಾಯವಾಗಿ ಬಿಟ್ಟುಬಿಡಬಹುದೆಂಬ ಅಂಶವೂ ಇವುಗಳಿಂದ ಸ್ಥಿರಪಡುತ್ತದೆ. ಈಗ ನಡಿಸಬೇಕಾದ ಏರ್ಪಾಡುಗಳ ವಿಷಯವಾಗಿ ಇಂಡಿಯಾ ಸರ್ಕಾರದವರು ನಿಮ್ಮ ಸರ್ಕಾರಕ್ಕೆ ಬರೆಯುವವರಾಗಿರುವದರಿಂದಲೂ ಮುಖ್ಯವಾಗಿ ಶಾಸ್ತ್ರದಿಂದ ವಿಧಾಯಕವಾದ ಯಾವ ಸಾಮಾನ್ಯ ಕಾರ್ಯವನ್ನೂ ಅದಕ್ಕೆ ಬಳಪಡುವ ಪ್ರದೇಶದ ಮತ್ತು ಜನಗಳ ವಿಶೇಷ ಸನ್ನಿವೇಶಗಳಿಗೆ ಸರಿಹೋಗುವಂತೆ ಬದಲಾಯಿಸಬೇಕಾಗಿರುವದರಿಂದಲೂ ಆ ಏರ್ಪಾಡುಗಳ ವಿಷಯವಾಗಿ ನಾವು ಇಲ್ಲಿ ಚರ್ಚಿಸಬೇಕಾದುದಿಲ್ಲ.

ಆದರೂ ಹಿಂದಿನ ಅನುಭವದಿಂದ ನಮಗೆ ತಿಳಿದುಬಂದಿರುವ ಒಂದು ಮುಖ್ಯವಾದ ವಿಷಯವನ್ನು ಮಾತ್ರ ನಾವು ಎಂದಿಗೂ ಮರೆಯಕೂಡದು. ನಾವು ಯಾರನ್ನು ಅಪಾಯದಿಂದ ರಕ್ಷಿಸಬೇಕೆಂದು ಅಪೇಕ್ಷಿಸುತ್ತೇವೆಯೋ ಆ ಜನರ ಬತ್ತಾಸೆಯನ್ನು ಪಡೆದುಕೊಂಡ ಹೊರತು ನಾವು ಮಾಡುವ ಏರ್ಪಾಡುಗಳು ಸಫಲವಾಗುವ ಸಂಭವವಿಲ್ಲ. ಪ್ಲೇಗು ನಿವಾರಣೆಯ ಕಾರ್ಯದಲ್ಲಿ ಗಮನಿಸಬೇಕಾದ ಮುಖ್ಯ ನಿಯಮವೇನೆಂದರೆ—ಜನರು ತಮ್ಮ ಪ್ರಾಣರಕ್ಷಣೋಪಾಯವನ್ನು ಬಹಳಮಟ್ಟಿಗೆ ತಾವೇ ಮಾಡಿಕೊಳ್ಳಬೇ

ಕು. ಮತ್ತು ಯಾವ ವಿಧವಾಗಿ ಕೆಲಸ ಮಾಡುವಂತೆ ನಿಶ್ಚಯಿಸಿದರೂ ಅದನ್ನು, ಕಾಳ್ಜಿಯಿಂದ, ಕನಿಕರದೊಡನೆ, ಜನರ ಇಷ್ಟಕ್ಕೂ ಸಂಪ್ರದಾಯಕ್ಕೂ ವಿಶೇಷವಾಗಿ ಗಮನಕೊಟ್ಟು ನಡಿಸಬೇಕು. ಇಂಡಿಯಾಭೇಕದ ಜನರು ಆರೋಗ್ಯ ನಿಯಮಗಳನ್ನು ಎಷ್ಟುಮಾತ್ರವೂ ಅನಾದರ ಮಾಡುವವರಲ್ಲ. ಅವರಲ್ಲಿ ಹಲವು ಪಂಗಡದವರು ತಮ್ಮ ಸ್ವಂತವಾದ ಉತ್ತಮ ನಿಯಮಗಳನ್ನು ಇಟ್ಟು ಕೊಂಡಿದ್ದಾರೆ. ಇವರೆಲ್ಲರೂ ಈಗಿನ ಆರೋಗ್ಯ ಸಂಬಂಧವಾದ ನಮ್ಮ ಅಭಿಪ್ರಾಯಗಳನ್ನೇ ಅಂಗೀಕರಿಸಬೇಕೆಂಬುದಾಗಿ ನಾವು ವಿವೇಚನೆಯಿಲ್ಲದೆ ಅವರನ್ನು ಬಲಾತ್ಕರಿಸುವಂತೆ ತೋರ್ಪಡಿಸಿಕೊಂಡರೆ ನಮ್ಮ ಉದ್ದೇಶಕ್ಕೇ ಭಂಗ ಉಂಟಾಗುವದು.

ಈ ವಿಚಾರವು ಅತ್ಯಂತ ಕಠಿನವಾದ್ದಾಗಿದೆ. ಅನೇಕ ಸಂದರ್ಭಗಳಲ್ಲಿ ಯುಕ್ತವೇ ಅಲ್ಲವೇ ಎಂಬ ವಿಚಾರವೊಂದೇ ಕಷ್ಟವಿಹಿತವಾದ ನಿರ್ಬಂಧಗಳನ್ನೆಲ್ಲಾ ಸ್ವಲ್ಪವೂ ತಡೆಯಿಲ್ಲದೆ ಆಚರಣೆಗೆ ತರಲು ಅಡ್ಡಿಯಾಗಿರುತ್ತದೆ. ಆದರೂ ಈಗ ಸರಕಾರಿಯಾಗಿ ನಿಮ್ಮಲ್ಲಿಗೆ ಕಳುಹಿಸಿರುವ ಸಲಹೆಗಳಿಗೆ ನೀವು ಆದರದಿಂದ ಗಮನಕೊಡುವಿರೆಂದು ಭರವಸವುಳ್ಳವರಾಗಿದ್ದೇವೆ. ಇನ್ನು ಮೇಲೆ ರೋಗದ ಹಾವಳಿಯನ್ನು ಸಂಪೂರ್ಣವಾಗಿ ಹೋಗಿಟ್ಟಿಗೆ ತರುವ ಕೆಲಸವು, ಜನಗಳ ಸಹಾಯದಿಂದ, ಬಹಳವಮಟ್ಟಿಗೆ ಸಮರ್ಪಕವಾಗಿ ನೆರವೇರುವದೆಂದು ಹಾರೈಸುತ್ತೇವೆ.

ಮಿಂಟೊ.